


# ನಿಜವಾದ ಅದ್ವೈತ ಜ್ಞಾನ

ಮೂಲ: ‘ಶ್ರೀರಾಮಕೃಷ್ಣ ವಚನವೇದ’ ಕಥೆ : **ಪ್ರೊ. ವೈ. ಹರಿಹರನ್** ಚಿತ್ರ : **ಸದಾಶಿವಂ**


**1** ಒಬ್ಬ ರಾಜನಿದ್ದ. ತನ್ನ ಗುರುವಿನ ಮೇಲೆ ಅವನಿಗೆ ಅಪಾರ ಶ್ರದ್ಧೆ, ಭಕ್ತಿಗಳಿದ್ದವು. ಯಾವುದೇ ಆಧ್ಯಾತ್ಮಿಕ ಸಂದೇಹ ಬಂದರೂ ಅವನು ತನ್ನ ಗುರುವನ್ನು ಕೇಳುತ್ತಿದ್ದ. ಒಂದು ಬಾರಿ ಅವನಿಗೆ ಅದ್ವೈತ ವೇದಾಂತವನ್ನು ಕುರಿತು ಕುತೂಹಲವುಂಟಾಯಿತು. ತನ್ನ ಗುರುವಿನ ಬಳಿಗೆ ಹೋಗಿ, ಅವರ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿ ಕೇಳಿದ...




3
ಗುರುಗಳು ರಾಜನಿಗೆ ಅದ್ವೈತ ವೇದಾಂತವನ್ನು ವಿವರಿಸಿದರು. ಅಂದಿನ ಅವರ ಪ್ರಧಾನ ಉಪದೇಶವೇನೆಂದರೆ, ಎಲ್ಲ ಜೀವಿಗಳಲ್ಲೂ ಒಂದೇ ಬ್ರಹ್ಮನು ನೆಲೆಸಿದ್ದಾನೆ, ಆದ ಕಾರಣ ಎಲ್ಲರೂ ಬ್ರಹ್ಮನೇ ಆಗಿದ್ದಾರೆ ಎಂದು. ರಾಜ ಚಿಂತಿಸಿದ..
ಚಿನ್ನ, ಭೂಮಿ, ಮನುಷ್ಯ , ಪ್ರಾಣಿ ಎಲ್ಲವೂ ಬ್ರಹ್ಮವೇ. ಅದೇ ಬ್ರಹ್ಮವು ಮಂತ್ರಿಯಲ್ಲೂ ಇದೆ, ಸೇವಕನಲ್ಲೂ ಇದೆ. ಮಂತ್ರಿಯ ಸ್ಥಾನದಲ್ಲಿ ಸೇವಕನನ್ನು ನಾನು ನೇಮಕ ಮಾಡಬಹುದು; ಸೇವಕನ ಜಾಗದಲ್ಲಿ ಮಂತ್ರಿಯನ್ನೂ ಇಡಬಹುದು. ಅದ್ಭುತ! ಇದೇ ಅದ್ವೈತವಲ್ಲವೆ?...
4
ಹೀಗೆ ಚಿಂತಿಸುತ್ತ ಅವನು ರಾಣಿಯ ಅಂತಃಪುರಕ್ಕೆ ಹೋದನು. ಸೇವಕಿ ರಾಣಿಗೆ ಗಾಳಿ ಬೀಸುತ್ತಿರುವುದನ್ನು ರಾಜ ನೋಡಿದ. ಅದೇ ಬ್ರಹ್ಮನು ರಾಣಿಯಲ್ಲೂ ಇದ್ದಾನೆ, ಸೇವಕಿಯಲ್ಲೂ ಇದ್ದಾನೆ. ಇಬ್ಬರ ನಡುವೆ ಯಾವ ವ್ಯತ್ಯಾಸವೂ ಇಲ್ಲ.
ಕೂಡಲೇ ಅವನು 'ತನ್ನ' ವೇದಾಂತವನ್ನು ತನ್ನ ಜೀವನದಲ್ಲಿ ಅನುಸರಿಸತೊಡಗಿದ. ಅವನು ಹೇಳಿದ..
5
ಓ ಸೇವಕಿ, ನಾಳೆಯಿಂದ ನೀನು ನನ್ನ ರಾಣಿಯಾಗುವೆ, ರಾಣಿ ನಿನ್ನ ಸೇವಕಿಯಾಗುವಳು. ನಿಮ್ಮಿಬ್ಬರಲ್ಲೂ ನಿಜವಾಗಿ ಯಾವುದೇ ವ್ಯತ್ಯಾಸವಿಲ್ಲ..!
ಮಹಾರಾಜ! ಏನಾಯಿತು? ಯಾಕೆ ಹೀಗೆ ಅಪ್ಪಣೆ ನೀಡುತ್ತಿರುವೆ?
ರಾಣಿ, ಸೇವಕಿ ಇಬ್ಬರೂ ಆಶ್ಚರ್ಯಚಕಿತರಾದರು. ಅವರಿಗೆ ಏನು ಮಾಡಬೇಕೆಂದೇ ತಿಳಿಯದಾಯಿತು.


6
ಅಂದು ರಾಜನ ಆಸ್ಥಾನದಲ್ಲಿ ಏನು ನಡೆಯಿತೆಂದು ತಿಳಿಯಲು ರಾಣಿ ರಹಸ್ಯವಾಗಿ ಪ್ರಯತ್ನ ಮಾಡಿದಳು. ಆಸ್ಥಾನದ ಸೇವಕಿಯನ್ನು ಕರೆದು ಕೇಳಿದಳು..
ವನಿತಾ! ರಾಜನ ಆಸ್ಥಾನದಲ್ಲಿ ಏನಾಯಿತು? ಮಹಾರಾಜ ಇಂದು ವಿಚಿತ್ರವಾಗಿ ಏಕೆ ವರ್ತಿಸುತ್ತಿದ್ದಾರೆ? ಅವರು ಯಾರನ್ನಾದರೂ ಭೇಟಿಯಾದರೆ?
ಮಹಾರಾಣಿ, ಇಂದು ರಾಜನ ಆಸ್ಥಾನದಲ್ಲಿ ಸಭೆ ಸೇರಲೇ ಇಲ್ಲ. ಆದರೆ ಇಂದು ಮಹಾರಾಜರು ರಾಜಗುರುಗಳನ್ನು ಭೇಟಿಯಾಗಿದ್ದರು. ಅಷ್ಟು ಮಾತ್ರವೇ ನನಗೆ ಗೊತ್ತು.
7
ಕೂಡಲೇ ರಾಣಿ ರಾಜಗುರುಗಳ ಬಳಿಗೆ ಹೋದಳು. ಅಲ್ಲಿ ಅವಳು ಗುರುಗಳ ಮುಂದೆ ತನ್ನ ಸಂಕಟವನ್ನು ತೋಡಿಕೊಂಡಳು.
ಗುರುದೇವಾ, ನಾನೀಗ ದೊಡ್ಡ ತೊಂದರೆಯಲ್ಲಿ ಸಿಲುಕಿಕೊಂಡಿದ್ದೇನೆ. ದಯವಿಟ್ಟು ನನಗೆ ಸಹಾಯ ಮಾಡಿ.
ರಾಣಿ, ನೀನೇನೂ ಚಿಂತಿಸಬೇಡ. ನೀನು ನಾನು ಹೇಳಿದಂತೆ ಮಾಡು, ಸಾಕು.
ಗುರು ಅವಳಿಗೆ ಗುಟ್ಟಾಗಿ ಏನೋ ಹೇಳಿಕೊಟ್ಟನು. ಆಗ ರಾಣಿಯ ಮುಖ ಆಶಾಕಿರಣದಿಂದ ಬೆಳಗಿತು.
8
ಮರುದಿನ ಗುರುಗಳು ಅರಮನೆಗೆ ಬಂದರು. ಅವರನ್ನು ಕಂಡು ರಾಜನಿಗೆ ಆನಂದವಾಯಿತು.
ಗುರುದೇವ, ದಯವಿಟ್ಟು ರಾಜನೊಂದಿಗೆ ಊಟಕ್ಕೆ ಬನ್ನಿ.
ಬನ್ನಿ, ಗುರುಗಳೆ. ಅದ್ವೈತ ವೇದಾಂತ ತುಂಬ ಸುಲಭ. ಇಂದು ನಾನು ಅದನ್ನು ಆಸ್ಥಾನದಲ್ಲಿ ಪ್ರಯೋಗ ಮಾಡಿ ನೋಡಬೇಕೆಂದಿದ್ದೇನೆ.
ಬಹಳ ರಸವತ್ತಾಗಿದೆ...
ಅವರಿಬ್ಬರೂ ಊಟಕ್ಕೆ ಕುಳಿತರು..
9
ಓ! ನಮ್ಮ ಎಲೆಗಳಲ್ಲಿ ತರಕಾರಿ ಸಿಪ್ಪೆ ಪದಾರ್ಥಗಳನ್ನು ಹಾಕಿದವರು ಯಾರು? ಇದು ರಾಜನಿಗೆ ಮತ್ತು ರಾಜಗುರುಗಳಿಗೆ ಮಾಡಿದ ಅಪಮಾನ! ಹೀಗೆ ಮಾಡಿದವರಿಗೆ ಶಿಕ್ಷೆ ನೀಡುತ್ತೇನೆ.
ಆದರೆ ಗುರುಗಳು ವಿಚಲಿತರಾಗದೆ ಕುಳಿತಿದ್ದರು..






ಪ್ರಾಪಂಚಿಕ ವ್ಯಕ್ತಿ ಅಪ್ರಾಮಾಣಿಕನಾಗಿರುತ್ತಾನೆ. ಅವನು ನಿಷ್ಕಪಟಿಯಾಗಿರಲಾರ. ಅವನು ದೇವರ ಮೇಲೆ ಭಕ್ತಿಯಿರುವಂತೆ ತೋರಿಸಿಕೊಳ್ಳುತ್ತಾನೆ, ಆದರೆ ಅವನಿಗೆ ಪ್ರಾಪಂಚಿಕ ವಸ್ತುಗಳಲ್ಲಿ ಆಸಕ್ತಿಯಿರುತ್ತದೆ. ಅವನು ಕಾಮಿನಿ-ಕಾಂಚನಗಳ ಮೇಲೆ ತೋರಿಸುವ ಪ್ರೀತಿಯ ಒಂದು ಸಣ್ಣ ತುಣುಕನ್ನೂ ದೇವರ ಮೇಲೆ ತೋರಿಸಲಾರನು. ಬಾಯಲ್ಲಿ ಮಾತ್ರ ತಾನು ದೇವರ ಭಕ್ತನೆನ್ನುತ್ತಾನೆ.

— ಶ್ರೀರಾಮಕೃಷ್ಣರು

